## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | 270/**19** |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ವಾಸಿಂ | |
| ತಂದೆಯ ಹೆಸರು | **ಅಸ್ಮಾನ್** | ಸಾಕ್ಷಿಗೆ ದಿಃ **18.07.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **32** ವರ್ಷ | |
| ಉದ್ಯೋಗ | ವ್ಯಾಪಾರ | ಪಿ.ಡಬ್ಲ್ಯೂ **-10** |
| ವಾಸ ಸ್ಥಳ | ಮೈಸೂರು | ಸಿ.ಡಬ್ಲ್ಯೂ **-09** |

### ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ದಿಃ 01.08.2019 ರಂದು ಮಧ್ಯಾಹ್ನ 2.45 ಗಂಟೆಯಿಂದ 3.30 ಗಂಟೆಯವರೆಗೆ ಪೊಲೀಸರು ಪೋಟೋ ತೆಗೆದು ಅಮಾನತ್ತು ಪಂಚನಾಮೆಯ ಮೇಲೆ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-9 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿಯು ಪೋಟೋಗಳನ್ನು ಗುರುತಿಸಿದ್ದು, ಪೋಟೋಗಳನ್ನು ಈಗಾಗಲೇ ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಚಾಕು ಎಂ.ಓ-5 ನ್ನು ಗುರುತಿಸಿರುವುದಿಲ್ಲ. ಪೊಲೀಸರು ಪಂಚನಾಮೆಯ ಮೇಲೆ ಏಕೆ ಸಹಿ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಪೋಟೋ ಏಕೆ ತೆಗೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

ದಿಃ 01.08.2019 ರಂದು ಮಧ್ಯಾಹ್ನ 3.00 ಗಂಟೆಯಿಂದ 4.00 ಗಂಟೆಯ ಸಮಯಕ್ಕೆ ಸಬ್ ಅರ್ಬನ್ ಬಸ್ ಸ್ಟ್ಯಾಂಡ್ ಬಳಿ ಇರುವ ಸರ್ಕಾರ ವಸತಿ ಗೃಹದ, ರಸ್ತೆಯ ಪಕ್ಕದ ಒಂದು ಪೊದೆಯಲ್ಲಿ ಆರೋಪಿತನು ಬಿಸಾಕಿ ಹೋಗಿದ್ದ ಎಂ.ಓ-5 ಚಾಕುವನ್ನು ಆರೋಪಿತನು ಪೊಲೀಸರ ಹಾಗೂ ನಮ್ಮ ಮುಂದೆ ಹಾಜರುಪಡಿಸಿದನು ಎಂದು ಸೂಚಿಸುವುದು ಸರಿಯಲ್ಲ. ಅದೇ ಕಾಲದಲ್ಲಿ ನಿಪಿ-10 ಮತ್ತು ನಿಪಿ-11 ರಂತೆ ಫೋಟೋ ತೆಗೆದರು ಎಂದು ಸೂಚಿಸುವುದು ಸರಿಯಲ್ಲ. ಪೊಲೀಸರು ಆರೋಪಿ ಹಾಜರುಪಡಿಸಿದನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-</u>**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು